ಸಾಧಕ ರೈತ

# ಕೌಶಲ್ಯ ತರಬೇತಿಯಿಂದ ಬದುಕು ಹಸನಾಗಿಸಿಕೊಂಡ ಗ್ರಾಮೀಣ ಯುವಕ ಶ್ರೀ ರವಿ

✍ ಚೈತನ್ಯ ಹೆಚ್. ಎಸ್., 9480458083 ಧನಂಜಯ ಬಿ., ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ತೆಳ್ಳಾರು ಗ್ರಾಮದಲ್ಲಿ ದಿನಗೂಲಿ ಕೆಲಸ ಮಾಡಿ, ತಕ್ಕಮಟ್ಟಿನ ಆದಾಯ ಪಡೆದು ಜೀವನ ನಿರ್ವಹಿಸುತ್ತಿದ್ದ ಗ್ರಾಮೀಣ ಯುವಕ ಶ್ರೀ ರವಿ. ಇವರ ವಿದ್ಯಾರ್ಹತೆ 7ನೇ ತರಗತಿ. ಇವರು ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಇವರಿಂದ ವಿವಿಧ ಕೌಶಲ್ಯ ತರಬೇತಿಯನ್ನು ಪಡೆದು ಹೆಚ್ಚಿನ ಆದಾಯದ ಜೊತೆಗೆ ಉತ್ತಮ ಜೀವನ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದಲ್ಲಿ 2014 ರಲ್ಲಿ ಆಯೋಜಿಸಿದ್ದ 2 ದಿನಗಳ ಅಣಬೆ ಕೃಷಿ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದರ ಮುಖಾಂತರ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಜೊತೆಗಿನ ನಂಟು ಬೆಳಸಿಕೊಂಡ ರವಿ ಅಣಬೆ ಕೃಷಿ ತರಬೇತಿ ಪಡೆದ ನಂತರ ತನ್ನಲ್ಲಿ ಇದ್ದ ಸೌಲಭ್ಯಗಳನ್ನು ಬಳಸಿ ಸಣ್ಣ ಪ್ರಮಾಣದಲ್ಲಿ ಹಾಲು ಅಣಬೆ ಕೃಷಿ ಮಾಡಲು ಪ್ರಾರಂಭಿಸಿದರು. ಇದರಲ್ಲಿ ಯಶಸ್ಸು ಕಂಡಾಗ ತೋಟಗಾರಿಕೆ ಇಲಾಖೆ, ಕಾರ್ಕಳ ಹಾಗೂ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಸಹಾಯಧನದ ನೆರವಿನಿಂದ ದೊಡ್ಡಮಟ್ಟದ ಸುಸಜ್ಜಿತ ಅಣಬೆ ಉತ್ಪಾದನಾ ಘಟಕವನ್ನು ಸ್ಥಾಪಿಸಿ, ಉತ್ತಮ ಗುಣಮಟ್ಟದ ಅಣಬೆಗಳನ್ನು ಪಡೆಯುವಲ್ಲಿ ಯಶಸ್ವಿಯಾದರು.



ಬೇಸಿಗೆ ಕಾಲದಲ್ಲಿ, ತಾಪಮಾನ $38^0$ ಸೆ.ಗಿಂತ ಅಧಿಕವಿದ್ದಾಗ ಹಾಲು ಅಣಬೆ ಉತ್ಪಾದನೆ ಹೆಚ್ಚಾಗಿದ್ದು, ಮಳೆಗಾಲ ಹಾಗೂ ಚಳಿಗಾಲದಲ್ಲಿ ಇದರ ಉತ್ಪಾದನೆ ಕಡಿಮೆಯಾಗಿರುತ್ತದೆ ಹಾಗೂ ರೋಗ ಲಕ್ಷಣಗಳು ಹೆಚ್ಚಾಗಿ ಕಂಡು ಬಂದದ್ದನ್ನು ಗ್ರಹಿಸಿ ಬೇರೆ ತಳಿಯ ಅಣಬೆ ಉತ್ಪಾದನೆಯ ಬಗ್ಗೆ ಯೋಜನೆ ಹಾಕಿಕೊಂಡು, ರವಿಯವರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳನ್ನು ಸಂಪರ್ಕಿಸಿದರು. ನಂತರ ಅವರ ಸಲಹೆಯಂತೆ, ಭಾರತೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ ಹೆಸರಘಟ್ಟ, ಬೆಂಗಳೂರಿನಲ್ಲಿ ಭೂಸಮೃದ್ಧಿ ಕಾರ್ಯಕ್ರಮದಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದ ಸಹಾಯ ದೊಂದಿಗೆ 2 ದಿನಗಳ ಉಚಿತ ಅಣಬೆ ತರಬೇತಿ ಶಿಬಿರದಲ್ಲಿ ಪಾಲ್ಗೊಂಡರು. ತರಬೇತಿ ಶಿಬಿರದಲ್ಲಿ ರವಿಯವರಿಗೆ ತಮ್ಮ ಅಣಬೆ ಘಟಕದಲ್ಲಿ ಪ್ರಸ್ತುತ ನಿರ್ವಹಿಸಿ ಕೊಂಡು ಬರುತ್ತಿರುವ ಕ್ರಮ ಗಳಲ್ಲಿರುವ ದೋಷಗಳ ಬಗ್ಗೆ ಅರಿವಾಯಿತು. ಹಾಲು ಅಣಬೆಗಿಂತ ಚಿಪ್ಪು ಅಣಬೆ ಬೆಳೆಯುವುದು ಹೆಚ್ಚು ಸುಲಭ ಮತ್ತು ಲಾಭದಾಯಕವೆಂದು ತಿಳಿಯಿತು.

ಭಾರತೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರದ ವಿಜ್ಞಾನಿಗಳ ಸಂಪರ್ಕ ಪಡೆದು ತಮಗೆ ಬೇಕಾದ ಚಿಪ್ಪು ಅಣಬೆಯ ಬೀಜ ಗಳನ್ನು ನೇರವಾಗಿ ಅಲ್ಲಿಂದಲೇ ಪಡೆದು ದೊಡ್ಡ ಪ್ರಮಾಣದಲ್ಲಿ ಚಿಪ್ಪು ಅಣಬೆ ಕೃಷಿಯನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಅದಲ್ಲದೆ ಚಿಪ್ಪು ಅಣಬೆ ಹೆಚ್ಚು ದಿನಗಳ ಕಾಲ ಕೆಡದಂತೆ ಇಡಲು ಕಷ್ಟಕರವಾದುದರಿಂದ, ಗ್ರಾಹಕರ ಅನುಕೂಲಕ್ಕಾಗಿ ಅಣಬೆ ಬೀಜ ಹಾಕಿರುವ ಹುಲ್ಲಿನ ಚೀಲಗಳನ್ನು (Ready to grow bags) ತಯಾರಿಸಿ ಆಸಕ್ತ ಗ್ರಾಹಕರಿಗೆ ಪ್ರತಿ ಚೀಲಕ್ಕೆ ರೂ.100 ರಂತೆ ಒದಗಿಸುತ್ತಿದ್ದಾರೆ. ಈ ರೀತಿ Ready to grow bags ಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ ಎಂದು ಸ್ವತಃ ರವಿಯವರ ಅನುಭವಕ್ಕೆ ಬಂದಿರುತ್ತದೆ.



ಈ ರೀತಿಯಾಗಿ ಅಣಬೆ ಕೃಷಿಯಲ್ಲಿ ತೊಡಗಿಸಿ ಕೊಂಡಿರುವ ರವಿಯವರು ತಿಂಗಳಿಗೆ 10 ಕೆ.ಜಿ. ಯಷ್ಟು ಚಿಪ್ಪು ಅಣಬೆ ಬೆಳೆಯುತ್ತಿದ್ದು ಚಿಪ್ಪು ಅಣಬೆಗೆ ಕೆ.ಜಿ.ಗೆ ರೂ.1800 ರಂತೆ ಒಟ್ಟು ರೂ.18000/– ರಷ್ಟು ಆದಾಯ ಪಡೆಯುತ್ತಿದ್ದಾರೆ.



ಇದಲ್ಲದೆ ಚಿಪ್ಪು ಅಣಬೆ ಕೃಷಿಯನ್ನು ತಮ್ಮ ಮನೆಯಲ್ಲಿಯೇ ಮಾಡಲು ಇಚ್ಛಿಸುವ ನಗರ ಹಾಗೂ ಗ್ರಾಮಾಂತರ ನಿವಾಸಿಗಳಿಗೆ ಅಣಬೆ ಬೀಜ ಬಿತ್ತಿರುವ ತುಂಬಿರುವ ಚೀಲಗಳನ್ನು (Ready to grow bags) ರೂ.100 ರಂತೆ ಪ್ರತಿ ತಿಂಗಳಿಗೆ 180 ಚೀಲಗಳನ್ನು ಮಾರುವುದರಿಂದ ಅಂದಾಜು ರೂ.19200/– ಆದಾಯ ಪಡೆಯುತ್ತಿದ್ದಾರೆ. ಒಟ್ಟಾರೆ ಅಣಬೆ ಕೃಷಿಯಿಂದ ತಿಂಗಳಿಗೆ ರೂ.20,000 ನಿವ್ವಳ ಆದಾಯ ಪಡೆಯುತ್ತಾರೆ.

ಅಲ್ಲದೇ ರವಿಯವರು 2018–19ನೇ ಸಾಲಿನಲ್ಲಿ ಕೌಶಲ್ಯ ತರಬೇತಿಯ ಬಗ್ಗೆ ಹೆಚ್ಚಿನ ಮಹತ್ವ ನೀಡುತ್ತಾ ಬಂದಿರುವ ಭಾರತ ಸರ್ಕಾರ, ಗ್ರಾಮೀಣ

**ಶ್ರೀ ರವಿಯವರ ವಿವಿಧ ಸ್ವಉದ್ಯೋಗದಿಂದ ಆದಾಯ**

| ಕ್ರ. ಸಂ. | ವಿವಿಧ ಸ್ವಉದ್ಯೋಗಗಳು | ತಿಂಗಳ ಗರಿಷ್ಠ ವರಮಾನ (ರೂಗಳಲ್ಲಿ) | ನಿವ್ವಳ ಲಾಭ ಪ್ರತಿ ತಿಂಗಳಿಗೆ (ರೂಗಳಲ್ಲಿ) | ಕೆಲಸದ ವೇಳೆ |
|---|---|---|---|---|
| 1. | ತೆಂಗಿನ ಕಾಯಿ ಕೀಳುವುದರಿಂದ ಪ್ರತಿ ಮರಕ್ಕೆ ರೂ. 40x20 ಮರಗಳು ಪ್ರತಿ ದಿನ (ಸರಾಸರಿ ಪ್ರತಿ ದಿನಕ್ಕೆ 20 ಮರದಲ್ಲಿ ಕಾಯಿ ಕೀಳುವುದರಿಂದ) ತಿಂಗಳಿಗೆ 24 ದಿವಸ | 19,200.00 | 16,200.00 | ಬೆಳಿಗ್ಗೆ 7.00 ರಿಂದ ಮಧ್ಯಾಹ್ನ 12 ಘಂಟೆವರೆಗೆ. (ರೂ. 3000 ಪೆಟ್ರೋಲ್ ಖರ್ಚು) |
| 2. | ಅಣಬೆ ಚೀಲಗಳನ್ನು (READY TO GROW BAGS) ಮಾರುವುದರಿಂದ ರೂ. 100 ಪ್ರತಿ ಚೀಲಕ್ಕೆ(ಸರಾಸರಿ 180 ಚೀಲ ತಿಂಗಳಲ್ಲಿ ಮಾರಾಟ ಮಾಡುವುದರಿಂದ) | 18,000.00 | 10,800.00 | ರೂ.7200 (Spawn, poly cover) ಕೂಲಿ ಇತ್ಯಾದಿ ಖರ್ಚು |
| 3. | ಅಣಬೆ ಕೃಷಿಯಿಂದ **(Oyster mushroom)** 10 ಕೆ.ಜಿ. ಪ್ರತಿ ತಿಂಗಳಿಗೆ (ರೂ. 1800 ಪ್ರತಿ ಕೆ.ಜಿ.ಯಂತೆ) | 18,000.00 | 8,400.00 | ರೂ.9600 (Spawn, poly cover ಕೂಲಿ, ನಿರ್ವಹಣೆ, ಇತ್ಯಾದಿ ಖರ್ಚು) |
| | **ಒಟ್ಟು** | **55,200.00** | **35,400.00** | |




ಯುವಕರಿಗೆ ತೆಂಗಿನ ಮರ ಹತ್ತುವ ಕೌಶಲ್ಯದ ಜೊತೆಗೆ ತೆಂಗಿನಲ್ಲಿ ಮೌಲ್ಯವರ್ಧನೆ, ಬೆಳೆ ನಿರ್ವಹಣೆ, ಕೀಟ ಮತ್ತು ರೋಗಗಳ ನಿಯಂತ್ರಣ ಕುರಿತು ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದಲ್ಲಿ 25 ದಿನಗಳ ತೆಂಗಿನ ಮರದ ಸ್ನೇಹಿತರು ಕೌಶಲ್ಯ ತರಬೇತಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ತೆಂಗಿನ ಮರ ಹತ್ತುವುದು, ತೆಂಗಿನಲ್ಲಿ ನೀರಾ ಉತ್ಪಾದನೆ, ತೆಂಗಿನ ರೋಗಗಳು ಮತ್ತು ಕೀಟ ನಿಯಂತ್ರಣ, ತೆಂಗಿನಲ್ಲಿ ಅಂತರ ಬೆಳೆ ಹಾಗೂ ಸಮಗ್ರ ಪೋಷಕಾಂಶಗಳ ನಿರ್ವಹಣೆ ಕುರಿತು ಸಂಪೂರ್ಣ ತಾಂತ್ರಿಕ ಮಾಹಿತಿ ಪಡೆದುಕೊಂಡರು.

ಪ್ರಸ್ತುತ ತೆಳ್ಳಾರು ಗ್ರಾಮ ಮತ್ತು ಸುತ್ತ ಮುತ್ತಲಿನ 7–8 ಗ್ರಾಮಗಳಲ್ಲಿ ತೆಂಗಿನ ಕಾಯಿ ತೆಗೆಯುವುದು ಮತ್ತು ತೆಂಗಿನ ಬಗ್ಗೆ ಮಾಹಿತಿ ನೀಡುವ ಕಾರ್ಯ ಕೈಗೊಂಡಿದ್ದಾರೆ. ರವಿಯವರು ಶ್ರಮ ಜೀವಿಯಾಗಿದ್ದು, ಬೆಳಿಗ್ಗೆ 7 ಘಂಟೆಗೆ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ತೆಂಗಿನ ಮರ ಹತ್ತಿ ಕಾಯಿ ಕೀಳುವ ಕೆಲಸ ಮಾಡುತ್ತಾರೆ. ಮಧ್ಯಾಹ್ನದ ನಂತರ ಅಣಬೆ ಕೃಷಿಯ ಕಾರ್ಯಚಟುವಟಿಕೆಗಳಲ್ಲಿ ಸಮಯವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಾರೆ. ಪ್ರತಿನಿತ್ಯ 25–30 ತೆಂಗಿನ ಮರಗಳನ್ನು ಹತ್ತಿ ಕಾಯಿ ಕೀಳುವ ಇವರು ಪ್ರತಿ ಮರಕ್ಕೆ ರೂ.40 ದರ ನಿಗದಿಪಡಿಸಿಕೊಂಡಿರುತ್ತಾರೆ. ತಿಂಗಳಿಗೆ 20–25 ದಿವಸ ತೆಂಗಿನ ಮರವೇರಿ ಕಾಯಿ ಕೀಳುವ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ರವಿಯವರು ಅಂದಾಜು ತಿಂಗಳಿಗೆ ರೂ. 16200/– **ನಿವ್ವಳ** ಆದಾಯವನ್ನು ಪಡೆಯುತ್ತಿದ್ದಾರೆ. ಸ್ವಂತ ದ್ವಿಚಕ್ರ ವಾಹನವನ್ನು ಬಳಸಿ ಪೂರ್ವನಿಯೋಜಿತ ತೋಟಗಳಿಗೆ ಭೇಟಿ ನೀಡಿ ತೆಂಗಿನ ಕಾಯಿ ಕೀಳುವಂತಹ ಕಾರ್ಯದಲ್ಲಿ ತೊಡಗಿಸಿ ಕೊಂಡಿರುತ್ತಾರೆ.

ಹೀಗೆ ಹಲವಾರು ಕಾರ್ಯಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿರುವ ಇವರು ಹೆಚ್ಚಿನ ವಿದ್ಯಾಭ್ಯಾಸ ಇಲ್ಲದೆ ಇದ್ದರೂ ಕೌಶಲ್ಯ ತರಬೇತಿಗಳನ್ನು ಪಡೆಯುವ ಮುಖಾಂತರ ಕೃಷಿ ಕ್ಷೇತ್ರದಲ್ಲಿ ಸಮರ್ಪಕವಾಗಿ ದುಡಿಮೆ ಮಾಡಬಹುದೆಂದು ಮನೋಭಾವ ರವಿಯವರಲ್ಲಿ ಕಾಣಬಹುದು. ಸಾವಯವ ತರಕಾರಿ ಹಾಗೂ ಸಿರಿಧಾನ್ಯಗಳನ್ನು ಬೆಳೆಯುವುದರ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವ ಇವರು ಮುಂದಿನ ದಿನಗಳಲ್ಲಿ ತಮ್ಮ ಕ್ಷೇತ್ರದಲ್ಲಿ ಸಮರ್ಪಕವಾಗಿ ಅಳವಡಿಸುವ ಕುರಿತಾಗಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಿಂದ ಮಾಹಿತಿಯನ್ನು ಪಡೆಯುತ್ತಿದ್ದಾರೆ.

**ರೈತರ ಹೆಸರು : ಶ್ರೀ ರವಿ, ತೆಳ್ಳಾರು ಗ್ರಾಮ, ಕಾರ್ಕಳ ತಾಲೂಕು, ಮೊಬೈಲ್ ಸಂಖ್ಯೆ: 6360923916**